ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 19.01.2024.

**ಪಾಟೀ ಸವಾಲು: ವಾದಿ ಪರ ವಕೀಲರಿಂದ:**

ವಾದಿ ಮತ್ತು ನನ್ನ ಜಮೀನುಗಳು ಒಂದೊಕ್ಕೊಂದು ಲಗತ್ ಆಗಿವೆ ಎಂದರೆ ಸರಿ. ದಾವಾ ಸ್ವತ್ತುನ್ನು ವಿಠ್ಠಲ್ ರಾವ್ ಪಾಟೀಲ್ ರವರಿಂದ ಖರೀದಿಸಿರುತ್ತೇನೆ ಎಂದರೆ ಸರಿ. ಖರೀದಿ ಪತ್ರದ ಪ್ರಕಾರ ನನ್ನ ಹೆಸರು ಪಹಣಿಗಳಲ್ಲಿ ಬಂದಿದೆ ಎಂದರೆ ಸರಿ. ದಾವಾ ಸ್ವತ್ತುನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನು ನನಗೆ ಇರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ಹೇಳಿದ್ದು, ತದನಂತರ ಇದೆ ಎಂದು ಹೇಳುತ್ತಾರೆ. ಸರ್ವೆ ನಂ.285 ರಲ್ಲಿ 2 ಎಕರೆ 10 ಗುಂಟೆ ಜಮೀನು ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿ. ನಾನು ನನ್ನ ಗಂಡ ಇಬ್ಬರು ಒಂದೇ ಮನೆಯಲ್ಲಿ ಇರುತ್ತೇವೆ ಎಂದರೆ ಸರಿ. ನನ್ನ ಗಂಡನನ್ನು ಬಿಟ್ಟು ನಾನು ಯಾವುದೇ ವ್ಯವಹಾರ ಮಾಡುವುದಿಲ್ಲ ಎಂದರೆ ಸರಿ.

ವಾದಿ ಹೆಂಡತಿಯ ಹೆಸರು ದಾನಬಾಯಿ ಇರುತ್ತದೆ. ಮೇಲೆ ಸರ್ವೆ ನಂ.285 ಕ್ಕೆ ಸಂಬಂಧಪಟ್ಟಂತೆ ಇದೆ ನ್ಯಾಯಾಲಯದಲ್ಲಿ ಗುಲಾಬ ಮತ್ತು ನನ್ನ ಮಧ್ಯ ಒಂದು ದಾವೆ ನಡೆದಿತ್ತು ಎಂದರೆ ಸರಿ. ಅದರ ನಂಬರ ಒಎಸ್.ನಂ.4/2020 ಎಂದರೆ ಸರಿ. ಸದರಿ ದಾವೆ ರೂ.1,00,000/- ಕೊಟ್ಟು ನಾನು ರಾಜಿಮಾಕೊಂಡಿರುತ್ತೇನೆ. ಸದರಿ ಹಣವನ್ನು ನ್ಯಾಯಾಲಯದ ಮುಂದೆ ಕೊಟ್ಟಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪಂಚಾಯತಿಯಲ್ಲಿ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ.ಗುಲಾಬಗೆ ನಾವು ರೂ.7,00,000/- ಗಳನ್ನು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮತ್ತು ಗುಲಾಬ ಮಧ್ಯ ಇರುವ ವ್ಯವಹಾರ ಮತ್ತು ಹಣ ಕೊಟ್ಟ ಬಗ್ಗೆ ನ್ಯಾಯಾಲಯಕ್ಕೆ ತೋರಿಸುವುದು ಬೇಡ

ಹಾಗೂ ನ್ಯಾಯಾಲಯದ ಹೊರಗೆ ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ.

ಈ ದಾವೆಯಲ್ಲಿ ನೋಟೀಸ್ ನ್ಯಾಯಾಲಯದಿಂದ ಬಂದ ನಂತರ ಪೋಸ್ಟ್ ಮಾಸ್ಟರ ಬಂದು ನನಗೆ ದಾವಾ ಸಮನ್ಸ್ ಜಾರಿ ಮಾಡಿ ನನ್ನ ಹೆಬ್ಬಟ್ಟಿನ ಗುರುತನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅಂಚೆ ಸ್ವಿಕೃತಿಯಲ್ಲಿರುವ ಹೆಬ್ಬಟ್ಟಿನ ಸಹಿ ನನ್ನದು ಇರುವುದಿಲ್ಲ. ಮೇಲೆ ಹೇಳಿದ ಅಂಚೆ ಸ್ವಿಕೃತಿಯಲ್ಲಿರುವ ಹೆಬ್ಬಟ್ಟಿನ ಸಹಿ ನನ್ನದು ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯು.ಕೆ. ಇನಮದಾರ ವಕೀಲರ ಮುಖಾಂತರ ಒಂದು ಪ್ರಮಾಣ ಪತ್ರ ಸಲ್ಲಿಸಿ ದಾವೆಯಲ್ಲಿರುವ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ ಹಾಗೂ ಪ್ರಮಾಣ ಪತ್ರದಲ್ಲಿ ಹೆಬ್ಬಟ್ಟಿನ ಸಹಿ ನನ್ನದೇ ಇರುತ್ತದೆ ಎಂದರೆ ಸರಿಯಲ್ಲ. ನಾನು ಇನಮದಾರ ವಕೀಲರ ವಕಾಲತ್ ಮೇಲೆ ಹೆಬ್ಬಟ್ಟಿನ ಸಹಿ ಮಾಡಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಎಲ್.ಕೆ.ಎಂ ವಕೀಲರನ್ನು ಕೊಟ್ಟ ಈ ದಾವೆಯಲ್ಲಿ ಹಾಜರಾಗಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಪ್ರತಿವಾದ ಪತ್ರದಲ್ಲಿರುವ ಹೆಬ್ಬಟ್ಟಿನ ಸಹಿಗಳು ನನ್ನದು ಇರುವುದಿಲ್ಲ, ಎಲ್ಲ ಸುಳ್ಳು ಇದೆ. ಈ ಕೇಸಿನಲ್ಲಿ ವಕೀಲರನ್ನು ನೇಮಿಸಿಕೊಂಡು ನನ್ನ ತಕರಾರನ್ನು ಸಲ್ಲಿಸಿರುವುದಿಲ್ಲ, ಎಲ್ಲ ಅವರೇ ಮಾಡಿರುತ್ತಾರೆ. ಅವರೇ ಎಂದರೆ ವಾದಿ ಮಾನಸಿಂಗ್ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಎಲ್ಲ ಹೆಬ್ಬಟ್ಟಿನ ಸಹಿಗಳು ನನ್ನದು ಇರುವುದಿಲ್ಲ. ನಿಪಿ-1 ರಲ್ಲಿರುವ ಛಾಯಾಚಿತ್ರಗಳು ನನ್ನ ಹಾಗೂ ಮಾನಸಿಂಗ್ ರವರದು ಆಗಿರುತ್ತವೆ. ಸಾಕ್ಷಿ ಮುಂದುವರೆದು ಗುಲಾಬ್‌ಗೆ ಕೊಟ್ಟಿದ್ದೆ ಅವುಗಳನ್ನು ಈ ಕೇಸಿಗೆ ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿರುವ ಎಲ್ಲ ಹೆಬ್ಬಟ್ಟಿನ

ಸಹಿಗಳು ನನ್ನದು ಇರುತ್ತವೆ ಎಂದರೆ ಸರಿಯಲ್ಲ.

ನಿಪಿ-1 ರಲ್ಲಿರುವ 1 ರಿಂದ 6 ನೇ ಸಾಕ್ಷಿದಾರರು ನನ್ನ ಮೈದುನರು ಇರುತ್ತಾರೆ. ಲಕ್ಷ್ಮಣ ದೇವರು ರಾಠೋಡ್ ಅಂದರೆ ನನ್ನ ಗಂಡ ಇರುತ್ತಾರೆ. ಕಾಶಿನಾಥ ಲಕ್ಷ್ಮಣ ನನ್ನ ಮಗ ಇರುತ್ತಾರೆ ಎಂದರೆ ಸರಿ. ನಿಪಿ-1 ರಲ್ಲಿಯ 7 ರಿಂದ 11 ರ ಸಾಕ್ಷಿದಾರರು ನಮ್ಮ ತಾಂಡಾದವರು ಇರುತ್ತಾರೆ. ನನ್ನ ಗಂಡ ಮತ್ತು ಮಗ ಇಬ್ಬರು ಆರೋಗ್ಯವಾಗಿದ್ದಾರೆ. ನನ್ನ ಗಂಡ ಮತ್ತು ಮಗ ಇಬ್ಬರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುತ್ತಾರೆ. ಈ ದಾವೆ ಸಲ್ಲಿಸಿದ ನಂತರ ವಾದಿ ಏನು ದಾವೆ ಸಲ್ಲಿಸಿರುತ್ತಾನೆ ಎಂದು ಬೇರೆಯವರ ಮುಖಾಂತರ ನಾನು ತಿಳಿದುಕೊಂಡಿಲ್ಲ. ವಾದಿ ಈ ದಾವೆಯಲ್ಲಿ ಯಾವ ಕಾಗದ ಪತ್ರ ಹಾಜರುಪಡಿಸಿರುತ್ತಾನೆ ಎಂದು ನಾನು ಚೌಕಾಶಿ ಮಾಡಿಲ್ಲ. ನನ್ನ ಹೆಬ್ಬೆಟ್ಟಿನ ಸಹಿಗಳನ್ನು ಪರೀಕ್ಷೆ ಮಾಡಲು ಹಾಗೂ ತಜ್ಞರ ವರದಿ ಪಡೆಯಲು ನನ್ನದು ಯಾವುದೇ ತಕರಾರು ಇರುವುದಿಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**